ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2121/2019

ಚಾಸಾ:2 ಪ್ರಾಸಾ:2

ದಿನಾಂಕ: 19.12.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಗಿರಿಜಾ |
| ಗಂಡನ ಹೆಸರು | : | ಮಂಜು ಪೂಜಾರಿ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಹರ್ಕೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ದಿ: 28-05-2019 ರಂದು ಸಂಜೆ 7-30ಕ್ಕೆ ಆರೋಪಿತರು ನಮ್ಮ ಮನೆಗೆ ಬಂದು ಚಾಸಾ-1ರವರಿಗೆ ಕೈಯಿಂದ ಹೊಡೆದು ಎಳೆದುಕೊಂಡು ಹೋಗಿ 1ನೇ ಆರೋಪಿ ಕಾಯಿ ಸುಲಿಯುವ ಜಾಕ್ ನಿಂದ ಹೊಡೆದಾಗ ಚಾಸಾ-1ರವರ ತಲೆಯ ಎಡ ಭಾಗಕ್ಕೆ ರಕ್ತಗಾಯವಾಗಿದ್ದು, ಮರದ ತುಂಡಿನಿಂದ ಹೊಡೆದಿರುತ್ತಾರೆ. ಆಗ ನಾನು ಮತ್ತು ನನ್ನ ಸೊಸೆ ತಡೆಯಲು ಹೋಗಿದ್ದು, ಸದ್ರಿ ಮರದ ತುಂಡನ್ನು ಎಸೆಯಲು ಮುಂದಾದಾಗ ಆಕೆ ತಡೆದಿದ್ದು, ಆಕೆಯನ್ನು ಬಿಡುವುದಿಲ್ಲ ಎಂದು ದಮ್ಕಿ ಹಾಕಿ ಅನಂತರ ಎಲ್ಲರೂ ಅವಾಚ್ಯವಾಗಿ ಬೈದಿರುತ್ತಾರೆ. ಅನಂತರ ಆರೋಪಿತರು ಜಾಕ್ ಮತ್ತು ಮರದ ತುಂಡನ್ನು ಹೊರಗೆ ಬಿಟ್ಟು ಹೊರಟು ಹೋಗಿರುತ್ತಾರೆ. ಅನಂತರ ನಾವು ಚಾಸಾ-4 ಮಣಿರವರಿಗೆ ಕರೆ ಮಾಡಿ ಚಾಸಾ-1ರವರನ್ನು ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ.

27 ನೇ ತಾರೀಕಿನಂದು ಅಶೋಕ ಶೆಟ್ಟಿರವರ ಮಗನ ಹುಟ್ಟು ಹಬ್ಬಕ್ಕೆ ಹೋಗಿದ್ದಾಗ ರಾಜು ಶೆಟ್ಟಿರವರಿಗೆ ಚಾಸಾ-1ರವರಿಗೆ ಮಾತುಕತೆಯಾಗಿದ್ದು, ಈ ಘಟನೆ ನಡೆದ ನಂತರ ಆ ವಿಚಾರ ನನಗೆ ತಿಳಿದು ಬಂದಿರುತ್ತದೆ. ಆ ನಡುವೆ ಆರೋಪಿತರು ಚಾಸಾ-1ರವರಿಗೆ ಕರೆ ಮಾಡಿ ನಿಂಧಿಸಿರುತ್ತಾರೆ. ನನಗೆ

ಮೊದಲು ದಿನೇಶ್ ರವರು ಹೊಡೆದಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಅದಾಗಿ 3 ದಿನಗಳ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಆಗ ಘಟನಾ ಸ್ಥಳವನ್ನು ನನ್ನ ಮತ್ತೊಂದು ಮಗ-ಚಾಸಾ-7ರವರು ತೋರಿಸಿರುತ್ತಾರೆ. ಸ್ಥಳದಲ್ಲಿ ಇದ್ದ ಬಳೆ, ಜಾಕ್ ಮತ್ತು ಮರದ ತುಂಡನ್ನು ವಶಕ್ಕೆ ಪಡೆದಿರುತ್ತಾರೆ. ಆ ವೇಳೆಗೆ ಪೋಟೋ ತೆಗೆದಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯನ್ನು ಮತ್ತು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಮತ್ತು 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಮಾ1 ರಿಂದ 3ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ಆ ದಿನ ನನಗೆ ಹೊಡೆದದ್ದು ಉದಯ್ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿನೇಶ್ ರವರೇ ಹೊಡೆದಿದ್ದು ಎಂದು ನುಡಿಯುತ್ತಾರೆ. ಸಾಕ್ಷಿ ಹೇಳಿಕೆ ನೀಡುವ ವೇಳೆಗೆ ಅಷ್ಟವಾಗಿ ಗಮನ ಇಲ್ಲದ ಕಾರಣ ಹೆಚ್ಚು ಕಮ್ಮಿಯಾಗಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಅಂಗಳದಲ್ಲಿ ಇದ್ದ ಮರದ ತುಂಡನ್ನು ತೆಗೆದುಕೊಂಡು ಉದಯ್ ಚಾಸಾ-1ರವರಿಗೆ ಹೊಡೆದಿರುತ್ತಾರೆ ಎಂದರೆ ನನಗೆ ಹೇಳಲಾಗುವುದಿಲ್ಲ ಕಾರಣ ಆ ವೇಳೆಗೆ ನನಗೆ ಪೆಟ್ಟು ಬಿದ್ದಿತ್ತು.

ಪಂಚನಾಮೆಯನ್ನು ದಿಃ 31 ರಂದು ಜರುಗಿಸಲಾಯಿತು ಎಂದರೆ ಸರಿ. ಆ ವೇಳೆಗೆ ಸ್ಥಳವನ್ನು ಚಾಸಾ-1ರವರು ತೋರಿಸಿರುತ್ತಾರೆ ಎಂದರೆ ಸರಿ. ಪಂಚನಾಮೆಯನ್ನು 11-15 ರಿಂದ 12 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಹೆಚ್ ಆರ್ ಎಸ್ ರವರಿಂದಃ</u>**

ಈಗ ನನ್ನ ಮಗ ಮತ್ತು ಸೊಸೆ ಆಲೂರಿನಲ್ಲಿ ಇದ್ದಾರೆ. ನಾವು ವಾಸ ಇರುವ ಮನೆ ನನ್ನ ಹೆಸರಿನಲ್ಲಿ ಇದೆ. ಪೊಲೀಸರು ಘಟನೆಯ ಬಗ್ಗೆ ಯಾವುದೇ ತನಿಖೆ ಮಾಡಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಯಾವುದೇ ಹೇಳಿಕೆ ನೀಡಿಲ್ಲ. ಚಾಸಾ-1 ಮತ್ತು 1ನೇ ಆರೋಪಿ ಮೊದಲಿಗೆ ಒಟ್ಟಾಗಿ ಹೊಸಪೇಟೆಯಲ್ಲಿ ಕೆಲಸ ಮಾಡುತ್ತಿದ್ದರು. ಎಷ್ಟು ವರ್ಷ ಕೆಲಸ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಆ ರೀತಿ 7-8 ವರ್ಷಗಳ ಹಿಂದೆ ಕೆಲಸ ಮಾಡಿದ್ದರು. ಸದ್ರಿ ಹೊಟೇಲ್ ನ್ನು ಮೊದಲಿಗೆ 1ನೇ ಆರೋಪಿ ನಡೆಸುತ್ತಿದ್ದರು ಎಂದರೆ ಸರಿ.

ಎಷ್ಟು ವರ್ಷ 1ನೇ ಆರೋಪಿ ಆ ಹೊಟೇಲ್ ನ್ನು ನಡೆಸಿದ್ದ ಎಂದು ನನಗೆ ತಿಳಿದಿಲ್ಲ ಆದರೆ ನನ್ನ ಮಕ್ಕಳು 2 ವರ್ಷ ಕೆಲಸ ಮಾಡಿರುತ್ತಾರೆ. ಅನಂತರ ಸದ್ರಿ ಹೊಟೇಲ್ ನ್ನು 1ನೇ ಆರೋಪಿ ಮತ್ತು ಚಾಸಾ-7 ರವರು 3-4 ವರ್ಷ ಒಟ್ಟಾಗಿ ನಡೆಸಿದ್ದಾರೆ ಎಂದರೆ ಸಾಕ್ಷಿ ಒಟ್ಟಾಗಿ ನಡೆಸಿದ್ದಾರೆ ಆದರೆ ಎಷ್ಟು ವರ್ಷ ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ವ್ಯವಹಾರ ನಡೆಸಿದ ಬಗ್ಗೆ ಲೆಕ್ಕಚಾರದ ವಿಚಾರ ನನಗೆ ತಿಳಿದಿಲ್ಲ. ಆ ಲೆಕ್ಕಚಾರದಲ್ಲಿ ರೂಪಾಯಿ 80 ಸಾವಿರವನ್ನು 1ನೇ ಆರೋಪಿಗೆ ಕೊಡಲು ನನ್ನ ಮಕ್ಕಳು ಬಾಕಿ ಇರುತ್ತಾರೆ ಎಂದರೆ ನನಗೆ ತಿಳಿದಿಲ್ಲ.

ನಾನು ವಾಸಿಸುವ ಮನೆ ನನ್ನ ಹೆಸರಿನಲ್ಲಿ ಮಂಜೂರಾಗಿರುತ್ತದೆ. ಸದ್ರಿ ಮನೆಯ ಪಹಣಿ ನನ್ನ ಹೆಸರಿನಲ್ಲಿ ಇಲ್ಲದೆ ರತ್ನಾಕರ ಹೆಗ್ಡೆರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ವಾಸದ ಮನೆಯ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದಿಲ್ಲ. ಘಟನೆ ನಡೆಯುವ ವೇಳೆಗೆ ನನ್ನ ಮಗ ಮದನ್ ಬೇರೆ ಎಲ್ಲೊ ಕೆಲಸ ಮಾಡುತ್ತಿದ್ದರು. ಮರುದಿನ ಬೆಳಗ್ಗೆ ಆತ ಮನೆಗೆ ಬಂದಿರುತ್ತಾರೆ. ಈ ಪ್ರಕರಣದಲ್ಲಿ ನಾನು, ನನ್ನ ಮಕ್ಕಳು ಮತ್ತು ಸೊಸೆಯನ್ನು ಬಿಟ್ಟು ಬೇರೆ ಯಾವುದೇ ಸಾಕ್ಷಿದಾರರು ಇರುವುದಿಲ್ಲ.

ಚಾಸಾ-1 ಮದ್ಯಪಾನ ಸೇವಿಸುತ್ತಾರೆ. ಅಶೋಕ ಶೆಟ್ಟಿರವರ ಮನೆಯ ಕಾರ್ಯಕ್ರಮಕ್ಕೆ ನಾನು ಹೋಗಿರಲಿಲ್ಲ. ಅಲ್ಲಿ ಏನು ಸಂಭವಿಸಿತ್ತು ಎಂದು ನನಗೆ ತಿಳಿದಿಲ್ಲ. ಆ ಘಟನೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ಗಲಾಟೆಯು ಸುಮಾರು ಅರ್ಧ ಗಂಟೆ ಕಾಲ ನಡೆದಿರುತ್ತದೆ. ಆರೋಪಿತರು ಎಲ್ಲಿಂದ

ಬಂದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಏಕಾಏಕಿ ಮನೆಯ ಒಳಗೆ ಬಂದಿರುತ್ತಾರೆ. ಆಗ ನಾನು ಬಿದ್ದು ಪೆಟ್ಟಾಗಿ ಪ್ರಜ್ಞೆ ತಪ್ಪಿರುತ್ತದೆ. ಅನಂತರ ನನ್ನನ್ನು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಾನು 3-4 ದಿನ ಚಿಕಿತ್ಸೆ ಪಡೆದಿರುತ್ತೇನೆ. ಯಾರು ಎಷ್ಟು ಪೆಟ್ಟು ಚಾಸಾ-1ರವರಿಗೆ ಹೊಡೆದಿರುತ್ತಾರೆ ಎಂದು ಹೇಳಲಾಗುವುದಿಲ್ಲ ಆದರೆ ಆತ ಪ್ರಜ್ಞಾ ಹೀನನಾಗಿರುತ್ತಾರೆ. ನಾವಿಬ್ಬರೂ ಒಂದೇ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ಆತನಿಗೆ ರಕ್ತಸ್ರಾವವಾಗಿತ್ತು. 2 ದಿನ ಆಸ್ಪತ್ರೆಯಲ್ಲಿ ಆತ ಚಿಕಿತ್ಸೆ ಪಡೆದಿರುತ್ತಾರೆ. ನಾವಿಬ್ಬರೂ ಬೇರೆ ಬೇರೆ ವಾರ್ಡ್‌ನಲ್ಲಿ ದಾಖಲಾಗಿದ್ದೇವು.

ಸದ್ರಿ ದಿನ ಚಾಸಾ-1 ಶರ್ಟ್ ಧರಿಸಿರಲಿಲ್ಲ. ಆತ ಧರಿಸಿದ್ದ ಚಡ್ಡಿಗೆ ರಕ್ತ ತಾಗಿರಲಿಲ್ಲ. ಚಾಸಾ-1ರವರಿಗೆ ಆಗಿದ್ದ ಗಾಯ ನನಗೆ ತಾಗಿರುವುದಿಲ್ಲ ಕಾರಣ ನಾನು ದೂರದಲ್ಲಿ ನಿಂತು ನೋಡುತ್ತಿದ್ದೆ. ಮುಮಾ1 ಮತ್ತು 2 ನಮ್ಮ ಮನೆಯಲ್ಲಿಯೇ ಇತ್ತು. ಸೌದೆ ತುಂಡು ಮನೆಯಲ್ಲಿ ಇತ್ತು ಅದನ್ನು ಸ್ವಲ್ಪ ದಿನದ ಹಿಂದೆ ತಂದು ಇರಿಸಲಾಗಿತ್ತು. ಮುಮಾ1 ಮತ್ತು 2ನ್ನು ಪೊಲೀಸರಿಗೆ ನನ್ನ ಮಕ್ಕಳು ತೆಗೆದುಕೊಂಡು ನೀಡಿರಬಹುದು. ನನಗೆ ಪೆಟ್ಟಾಗಿ ಆಸ್ಪತ್ರೆಗೆ ದಾಖಲಾಗಿದ್ದ ವಿಚಾರವನ್ನು ಪೊಲೀಸರಿಗೆ ತಿಳಿಸಿಲ್ಲ. ಸದ್ರಿ ದಿನ ಕತ್ತಲೆ ಇದ್ದ ಕಾರಣ ಯಾರು ಯಾರಿಗೆ ಎಷ್ಟು ಪೆಟ್ಟು ಹೊಡೆದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ಚಾಸಾ-4 ರವರನ್ನು ಚಾಸಾ-3ರವರು ಕರೆಯಿಸಿರುತ್ತಾರೆ. ಚಾಸಾ-3ರವರಿಗೆ ಬಳೆ ಒಡೆದಾಗ ಗಾಯವಾಗಿರಬಹುದು ಆದರೆ ನಾನು ನೋಡಿಲ್ಲ. ಸದ್ರಿ ದಿನ ರಸ್ತೆಯ ಮೇಲೆ ಯಾವುದೇ ಗಲಾಟೆಯಾಗಿಲ್ಲ. ಕತ್ತಲೆಯಾದ ಕಾರಣ ಯಾರು ಯಾರು ಬಂದಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಸುಮಾರು 10-12 ಮನೆಗಳು ಇವೆ. ಅಲ್ಲಿಂದ ಯಾರು ಗಲಾಟೆ ನೋಡಲು ಬಂದಿರುವುದಿಲ್ಲ. ನಾವು ಚೀರಾಡಿರುವುದಿಲ್ಲ. ಆರೋಪಿತರು ಸಹ ಆ ರೀತಿ ಬೈದಾಡಿ ಕೂಗಾಡಿರುವುದಿಲ್ಲ.

ಚಾಸಾ-1 ಮತ್ತು ಆರೋಪಿತರ ನಡುವೆ ವ್ಯವಹಾರ ಅಥವಾ ದ್ವೇಷ ಇರುವ ಬಗ್ಗೆ ನನಗೆ ತಿಳಿದಿಲ್ಲ. ಹಿಂದಿನ ದಿನ ಕುಡಿದು ಗಲಾಟೆ ನಡೆದಿರುವುದು ಚಾಸಾ-1 ಮತ್ತು ಆರೋಪಿತರ ನಡುವೆ

ಆಗಿರುವುದಿಲ್ಲ. ಸದ್ರಿ ದಿನ ಪೊಲೀಸರು ಏನೆಲ್ಲಾ ಬರವಣಿಗೆ ಮಾಡಿಕೊಂಡಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಪಂಚನಾಮೆಗೆ ಯಾರೆಲ್ಲಾ ಸಹಿ ಮಾಡಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಆಸ್ಪತ್ರೆಯಲ್ಲಿ ಇದ್ದಾಗ ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿಲ್ಲ. ಮನೆಯಲ್ಲಿ ಮಾಡಿರುತ್ತೇನೆ.

ಚಾಸಾ-1ರವರು ಕುಡಿತದ ಚಟದಲ್ಲಿ ಅವಘಡದಿಂದ ಬಿದ್ದು ಆದ ಗಾಯವನ್ನು ದುರಪಯೋಗಪಡಿಸಿಕೊಂಡು 1ನೇ ಆರೋಪಿ ಚಾಸಾ-1ರವರಿಂದ ಬಾಕಿ ಇದ್ದ ರೂಪಾಯಿ 80 ಸಾವಿರವರನ್ನು ಆ ವೇಳೆಗೆ 2-3 ಬಾರಿ ಕೇಳಿದ್ದು ಅದನ್ನು ತಪ್ಪಿಸಿಕೊಳ್ಳಲು ಆರೋಪಿತರ ವಿರುದ್ದ ಈ ರೀತಿ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮನೆ ನನ್ನ ಹೆಸರಿನಲ್ಲಿ ಇಲ್ಲದೆ ಆರೋಪಿತರು ಅಲ್ಲಿ ಪ್ರವೇಶಿಸಿ ಯಾವುದೇ ಗಲಾಟೆಯನ್ನು ಚಾಸಾ-1ರವರ ಮೇಲೆ ಮಾಡಿಲ್ಲ ಎಂದರೆ ಸರಿಯಲ್ಲ.

ಮುಮಾ2 ಮರದ ಕಂಬವಾಗಿದ್ದು 6-7 ಉದ್ದ, 2 ಅಡಿ ಅಗಲವಿರುತ್ತದೆ ಎಂದರೆ ಸರಿ. ಸದ್ರಿ ಕಂಬ ಸ್ಥಳದಲ್ಲಿ ಇಲ್ಲದೆ ಅದನ್ನು ಪೊಲೀಸರಿಗೆ ನಾವೇ ಹಾಜರುಪಡಿಸಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮುಮಾ1 ನ್ನು ಸಹ ಪ್ರಕರಣಕ್ಕೆ ಅನುಗುಣವಾಗಿ ಮನೆಯಲ್ಲಿ ಇದ್ದ ಮಾಲನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನಮಕ್ಕಳು ಎಂದಿಗೂ ರತ್ನಾಕರ ಹೆಗ್ಡೆಯವರ ಮನೆಯಲ್ಲಿ ಕೆಲಸ ಮಾಡಿಲ್ಲ. ನಾವು ಆತನ ವಿರುದ್ದ ದೂರು ದಾಖಲಿಸಿದ್ದು ನನ್ನ ಮಗ ವಾಪಸ್ಸು ಬಂದ ನಂತರ ದೂರನ್ನು ಹಿಂದಕ್ಕೆ ಪಡೆದಿರುತ್ತೇವೆ.

ನನ್ನ ಮಕ್ಕಳನ್ನು ಕೆಲಸಕ್ಕೆ ಸೇರಿಸಿ ಅವರು ಸಾಲ ಮಾಡಿ ದುಡ್ಡು ಕೊಡಲು ಬಾಕಿ ಇದ್ದಾಗ ಠಾಣೆಗೆ ಹೋಗಿ ಸುಳ್ಳು ದೂರು ಕೇಸು ದಾಖಲಿಸುವುದು ನನ್ನ ಹವ್ಯಾಸ ಎಂದರೆ ಸರಿಯಲ್ಲ. ಈ ರೀತಿ 2-3 ಬಾರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರತ್ನಾಕರ ಹೆಗ್ಡೆಯವರ ಸ್ಥಳದ ಬಾಬ್ತು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಯಾವುದೇ ಘಟನೆ

ಸಂಭವಿಸಿಲ್ಲ ಹಾಗೂ ಆರೋಪಿತರು ಯಾವುದೇ ಹಲ್ಲೆಯನ್ನು ನಡೆಸಿಲ್ಲ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಚಾಸಾ-3 ರವರು ಆ ದಿನ ನೀಲಿ ಬಣ್ಣದ ಬಳೆ ಧರಿಸಿದ್ದರು. ಅದನ್ನು ಪೊಲೀಸರಿಗೆ ಆಕೆ ಹಾಜರುಪಡಿಸಿರುತ್ತಾರೆ. ಅದನ್ನು ಸದ್ರಿ ದಿನ ತೆಗೆದುಕೊಂಡು ಹೋಗಿರುತ್ತಾರೆ. ಅಲ್ಲಿ ಬೇರೆ ಯಾವುದೇ ಕ್ರಮ ಜರುಗಿಸಿಲ್ಲ. ಮುಮಾ1 ರಿಂದ 3 ಕ್ಕೂ ಆರೋಪಿತರಿಗೂ ಈ ಘಟನೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಏನೇನು ಇದೆ ಎಂದು ಪೊಲೀಸರು ನಮೂದಿಸಿಕೊಂಡಿರುವ ಬಗ್ಗೆ ನನಗೆ ತಿಳಿದಿಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**